


International Journal of Kannada Research
www.kannadajournal.com

ISSN: 2454–5813
IJKR 2019; 5(2): 185-188
© 2019 IJKR
www.kannadajournal.com
Received: 06-04-2019
Accepted: 07-05-2019

**ಡಾ.ಸಿ.ಕೆ.ಕೊಟ್ರಪ್ಪ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ದಾವಣಗೆರೆ, ಕರ್ನಾಟಕ, ಭಾರತ

**Correspondence**
**ಡಾ.ಸಿ.ಕೆ.ಕೊಟ್ರಪ್ಪ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ದಾವಣಗೆರೆ, ಕರ್ನಾಟಕ, ಭಾರತ

# ಚಿತ್ರದುರ್ಗ ಜಿಲ್ಲೆಯ ಶಾಸನೋಕ್ತ ದೇವಾಲಯಗಳು

**ಡಾ.ಸಿ.ಕೆ.ಕೊಟ್ರಪ್ಪ**

**DOI:** https://doi.org/10.22271/24545813.2019.v5.i2c.940

ಪ್ರಸ್ತುತ ಚಿತ್ರದುರ್ಗ ಜಿಲ್ಲೆಯಲ್ಲಿ ಐದುನೂರಕ್ಕೂ ಹೆಚ್ಚು ದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಶಾಸನೋಕ್ತವಾಗಿರುವ ದೇವಾಲಯಗಳ ಸಂಖ್ಯೆ ಸರಿ ಸುಮಾರು ನೂರು ಎಂದು ಹೇಳಬಹುದು. ಪ್ರಸ್ತುತ ಲೇಖನ ದಲ್ಲಿ ಶಾಸನೋಕ್ತ ದೇವಾಲಯಗಳ ಬಗ್ಗೆ ಚರ್ಚಿಸಿರುವು ದರಿಂದ ನೂರಕ್ಕೂ ಅಧಿಕವಿರುವ ಈ ರೀತಿಯ ಶಾಸನೋಕ ದೇವಾಲಯಗಳಲ್ಲಿ ಕೆಲವು ಸಂಪೂರ್ಣವಾಗಿ ನಾಶವಾಗಿದ್ದರೆ, ಬಹುತೇಕವು ಶಿಥಿಲಾವಸ್ಥೆಯಲ್ಲಿಯೂ, ಕೆಲವೇ ಕೆಲವು ಸುಸ್ಥಿತಿಯಲ್ಲಿಯೂ ಇರುವುದು ಕಂಡುಬರುತ್ತವೆ. ಇಲ್ಲಿಯ ಕೆಲವು ದೇವಾಲಯಗಳು ಮೂಲ ರಾಜಮನೆತನದವರಿಂದ ನಿರ್ಮಾಣಗೊಂಡು ನಂತರ ಇಲ್ಲಿ ಆಳ್ವಿಕೆ ನಡೆಸಿದ ಅರಸು ಮನೆತನದವರಿಂದ ಜೀರ್ಣೋದ್ಧಾರಗೊಂಡಿವೆ. ಉದಾಹರಣೆಗೆ ಚಾಲುಕ್ಯ ಕಾಲದ ದೇವಾಲಯಗಳು ಹೊಯ್ಸಳರ ಕಾಲದಲ್ಲಿಯೂ, ಹೊಯ್ಸಳರ ಕಾಲದ ದೇವಾಲಯಗಳು ವಿಜಯನಗರ ಅರಸರ ಕಾಲದಲ್ಲಿಯೂ ಹೀಗೆ ಇಲ್ಲಿಯ ಬಹುತೇಕ ದೇವಾಲಯಗಳು ವಿಜಯನಗರ ಅರಸರ ಕಾಲದಲ್ಲಿ ಜೀರ್ಣೋದ್ಧಾರವಾಗಿರುವುದನ್ನು ಕಾಣಬಹುದು.

ಪ್ರಸ್ತುತ ಶಾಸನೋಕ್ತ ದೇವಾಲಯಗಳಲ್ಲಿ ಹೆಚ್ಚಿನ ಸಂಖ್ಯೆಯವು ಶೈವಧರ್ಮಕ್ಕೆ ಸಂಬಂಧಿಸಿದ್ದರೆ ನಂತರದ ಸ್ಥಾನದಲ್ಲಿ ವೈಷ್ಣವ ದೇವಾಲಯಗಳಿವೆ. ಉಳಿದಂತೆ ಜೈನ, ಶಾಕ್ತ ಹಾಗೂ ವಿರಳವಾಗಿ ಹನುಮಂತನಿಗಾಗಿ ನಿರ್ಮಾಣ ಗೊಂಡ ದೇವಾಲಯಗಳೂ ಸಹ ಅಸ್ತಿತ್ವದಲ್ಲಿದ್ದ ಬಗ್ಗೆ ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ.

ಜಿಲ್ಲೆಯ ಇತಿಹಾಸವನ್ನು ಅವಲೋಕಿಸಿದರೆ ಇಲ್ಲಿನ ವಾಸ್ತುಕಲಾ ಚಟುವಟಿಕೆಗಳು ಪ್ರಾಗ್ಚಾರಿತ್ರಿಕ ಕಾಲದಲ್ಲೇ ಆರಂಭಗೊಂಡಿರುವುದನ್ನು ಕಾಣುತ್ತೇವೆ. ನಿರ್ದಿಷ್ಟವಾಗಿ ದೇವಾಲಯಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಬ್ರಹ್ಮಗಿರಿ ಪರಿಸರದಲ್ಲಿ ನಡೆದಿರುವ ಉತ್ಖನನದಲ್ಲಿ ಗಜಪೃಷ್ಠಾಕಾರದ ಇಟ್ಟಿಗೆಯ ಕಟ್ಟಡಗಳು ದೊರೆತಿದ್ದು ಬಹುಷಃ ಇವುಗಳೇ ಇಲ್ಲಿನ ಪ್ರಾಚೀನತಮ ದೇವಾಲಯಗಳಿರಬೇಕೆನಿಸುತ್ತದೆ. ಆದರೆ ಶಾಸನೋಕ್ತ ದೇವಾಲಯಗಳನ್ನು ಕುರಿತು ಹೇಳುವುದಾದರೆ ನೊಳಂಬ, ರಾಷ್ಟ್ರಕೂಟ, ಪಲ್ಲವ ಕಾಲದಲ್ಲಿ ರಚನೆಗೊಂಡಿರುವ ದೇವಾಲಯಗಳನ್ನುಉದಾಹರಿಸಬಹುದು.

ಕ್ರಿ.ಶ.851ರ ಮಧುರೆಯ ಶೈವ ದೇವಾಲಯ, ಕ್ರಿ.ಶ. 961ರ ಜಟಿಂಗ ಬೆಟ್ಟದ ಮೇಲಿನ ರಾಮೇಶ್ವರ ದೇವಾಲಯ, ಕ್ರಿ.ಶ. 964ರ ಚಿಕ್ಕಂದವಾಡಿಯ ಮಹೇಶ್ವರ ದೇವಾಲಯ, ಕ್ರಿ.ಶ. 968ರ ಕ್ಯಾಸಾಪುರದ ಕಲ್ಲೇಶ್ವರ ದೇವಾಲಯ ಮತ್ತು ಕ್ರಿ.ಶ. 969ರ ಗುಂಡೇರಿ ಚನ್ನಕೇಶವ ದೇವಾಲಯಗಳು ಇಲ್ಲಿನ ಶಾಸನೋಲ್ಲೇಖಿತ ಆರಂಭ ಕಾಲದ ದೇವಾಲಯಗಳು, ಇವುಗಳಲ್ಲಿ ಜಟಿಂಗರಾಮೇಶ್ವರ ದೇವಾಲಯದ ನಿರ್ಮಾಣ ಅಥವಾ ಅಸ್ತಿತ್ವದ ಬಗ್ಗೆ ಇಲ್ಲಿನ ಶಾಸನಗಳಲ್ಲಿ ಅನೇಕ ಮಹತ್ವದ ಸಂಗತಿಗಳು ತಿಳಿದಬರುತ್ತವೆ. ಕ್ರಿ.ಶ. 961ರ ಶಾಸನವು, ರಾವಣನು ಸೀತೆಯನ್ನು ಹೊತ್ತೊಯ್ಯುವಾಗ ಜಟಾಯು ಅಡ್ಡಿಪಡಿಸಲು ರಾವಣನು ಜಟಾಯುವನ್ನು ಕೊಂದು ಮುಂದೆ ನಡೆದನು. ಹಾಗಾಗಿ ಇದರ ಜ್ಞಾಪಕಾರ್ಥವಾಗಿ ಮೊದಲೇ ಅಸ್ತಿತ್ವದಲ್ಲಿದ್ದ ಇಟಗಿಯ ದೇವಾಲಯವನ್ನು ಸಂಪೂರ್ಣವಾಗಿ ಶಿಥಿಲಗೊಳಿಸಿ ಕಲ್ಲಿನ ದೇವಾಲಯವನ್ನು ನಿರ್ಮಾಣ ಮಾಡಿದ ವಿವರ ನೀಡುತ್ತದೆ. ಕ್ರಿ.ಶ.1071ರ ಮತ್ತೊಂದು ಶಾಸನವು ನೊಳಂಬ ಪಲ್ಲವ ಪೆರ್ಮಾಡಿ ಜಯಸಿಂಗ ದೇವನು ತನ್ನ ಆಡಳಿತಾವಧಿಯಲ್ಲಿ ರಾಮೇಶ್ವರ ದೇವಾಲಯಕ್ಕೆ ದಾನ ನೀಡಿದ ವಿವರ ನೀಡುತ್ತದೆ. ಮತ್ತೊಂದು ಶಾಸನವು ಹೊಯ್ಸಳ ಅರಸ ವಿಜಯಾದಿತ್ಯನು ನೊಳಂಬವಾಡಿ 36000 ವನ್ನು ಆಳುತ್ತಿರುವಾಗ ಕ್ರಿ.ಶ.1064ರಲ್ಲಿ ದಾನ ನೀಡಿದ

ವಿವರ ನೀಡುತ್ತದೆ. ಹೀಗೆ ಈ ದೇವಾಲಯಕ್ಕೆ ಸಂಬಂಧಿಸಿದ ಶಾಸನಗಳನ್ನು ಹಾಗೂ ಶೈಲಿಯನ್ನೆ ಗಮನಿಸಿದರೆ, ಅದು ಚಾಲುಕ್ಯ ಕಾಲದಲ್ಲಿ ನಿರ್ಮಾಣಗೊಂಡಿದೆ ಎಂದು ಹೇಳಬಹುದು. ಆದರೆ ಮೊದಲೇಯಿದ್ದ ಇಟ್ಟಿಗೆಯ ದೇವಾಲಯದ ವಿವರಗಳನ್ನು ಗಮನಿಸಿದರೆ ಬಹುಶಃ ಚಾಲುಕ್ಯ ಪೂರ್ವ ಕಾಲದಲ್ಲೇ ಈ ದೇವಾಲಯ ಅಸ್ತಿತ್ವದಲ್ಲಿತ್ತೆಂದು ಹೇಳಬಹುದು. ಭಾರತೀಯ

ದೇವಾಲಯದ ಉಗಮ ಮತ್ತು ಬೆಳವಣಿಗೆಯನ್ನು ಗಮನಿಸಿದರೆ ಆರಂಭ ಕಾಲದ ದೇವಾಲಯಗಳು ಇಟ್ಟಿಗೆಯಿಂದಲೇ ನಿರ್ಮಾಣ ಗೊಳ್ಳುತ್ತಿದ್ದವೆಂದು ತಿಳಿದು ಬರುತ್ತದೆ. ಈ ದೇವಾಲಯದ ಅನತಿ ದೂರದಲ್ಲೇ ಇಟ್ಟಿಗೆಯ ಚೈತ್ಯಾಕಾರದ ಕಟ್ಟಡವು ದೊರೆತಿದ್ದು ಅದರ ಕಾಲವನ್ನು ಶಾತವಾಹನ ಅಥವಾ ಕ್ರಿ.ಶ. ಆರಂಭ ಕಾಲದ್ದೆಂದು ಹಲವಾರು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಜಟಂಗ ರಾಮೇಶ್ವರದ ಬೆಟ್ಟದ ತಪ್ಪಲಿನಲ್ಲಿ ಇಟ್ಟಿಗೆಯಿಂದ ನಿರ್ಮಾಣಗೊಂಡು ಶಿಥಿಲಾವಸ್ಥೆ ಯಲ್ಲಿರುವ ಇನ್ನು ಕೆಲವು ಚಿಕ್ಕ ಚಿಕ್ಕ ಗುಡಿಗಳನ್ನು ಗಮನಿಸಿದರೆ ಈ ದೇವಾಲಯವು ಚಾಲುಕ್ಯ ಪೂರ್ವ ಕಾಲದಲ್ಲೇ ಅಂದರೆ ಕದಂಬ – ರಾಷ್ಟ್ರಕೂಟ ಕಾಲಕ್ಕಾಗಲೇ ನಿರ್ಮಾಣಗೊಂಡಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಚಿತ್ರದುರ್ಗ ಜಿಲ್ಲೆಯ ಚಾಲುಕ್ಯರ ಕಾಲದ ಶಾಸನೋಕ್ತ ದೇವಾಲಯಗಳೆಂದರೆ ಹಿರೇಬೆನ್ನೂರಿನ ರಾಮೇಶ್ವರ ದೇವಾಲಯ, ಬಾಗೇನಹಾಳಿನ ಬ್ರಹ್ಮೇಶ್ವರ ದೇವಾಲಯ, ಪರಶುರಾಂಪುರದ ಚನ್ನಕೇಶವ ದೇವಾಲಯ, ಸಿದ್ಧಯ್ಯನ ಕೋಟೆಯ ಬ್ರಹ್ಮೇಶ್ವರ ದೇವಾಲಯ, ಗುಂಗನೂರಿನ ಕುಂಭೇಶ್ವರ ದೇವಾಲಯ, ಓಬಳಾಪುರದ ರಾಮೇಶ್ವರ ದೇವಾಲಯ, ಚಿತ್ರದುರ್ಗ ಕೋಟೆಯೊಳಗಿನ ಹಿಡಂಬೇಶ್ವರ, ಸಂಪಿಗೆ ಸಿದ್ದೇಶ್ವರ ಇತ್ಯಾದಿಗಳು ಪ್ರಮುಖವು. ಈ ದೇವಾಲಯಗಳು ಸರಳವಾಗಿ ರಚನೆಗೊಂಡಿದ್ದು ಚಾಲುಕ್ಯ ಶೈಲಿಯಲ್ಲಿ ರಚನೆಗೊಂಡಿವೆ.

ಕೆಲವು ದೇವಾಲಯಗಳು ಬಾಹ್ಯ ಲಕ್ಷಣಗಳಿಂದ ಹೊಯ್ಸಳ – ವಿಜಯನಗರ ಕಾಲದ ದೇವಾಲಯಗಳೆಂದು ಕಂಡುಬರುತ್ತವೆ. ಆದರೆ ಅವುಗಳ ಗರ್ಭಗೃಹ, ಅಂತರಾಳ, ನವರಂಗದ ಕಂಬಗಳು ಹಾಗೂ ಇನ್ನಿತರ ಶಿಲ್ಪಗಳ ಸಹಾಯ ದಿಂದ ಅವುಗಳು ಚಾಲುಕ್ಯರ ಕಾಲದಲ್ಲೇ ನಿರ್ಮಾಣ ಗೊಂಡಿರಬಹುದೆಂದು ಹೇಳಬಹುದು. ಉದಾಹರಣೆಗೆ ಬ್ರಹ್ಮಗಿರಿಯ ತ್ರಿಶಂಕೇಶ್ವರ ದೇವಾಲಯ, ಹೆಗ್ಗೆರೆಯ ಕಲ್ಲೇಶ್ವರ ದೇವಾಲಯ, ಚಿತ್ರದುರ್ಗ ಕೋಟೆಯೊಳಗಿನ ಗೋಪಾಲಕೃಷ್ಣ ದೇವಾಲಯ, ಫಲ್ಗುಣೇಶ್ವರ, ಹೊಳಲ್ಕೆರೆಯ ಶಿವಾಲಯ, ಕೋಗುಂಡೆಯ ಬಾಚೇಶ್ವರ, ನೀರುಂದದ ಕಲ್ಲೇಶ್ವರ, ಮಲ್ಲೇಶ್ವರ ಹಾಗೂ ಸಿದ್ದೇಶ್ವರ ದೇವಾಲಯಗಳು.

ನೀರುಂದದ ಸಿದ್ದೇಶ್ವರ ದೇವಾಲಯವನ್ನು ಹೊರಗಿನಿಂದ ಗಮನಿಸಿದರೆ ಇದೊಂದು ಹೊಯ್ಸಳರ ಕಾಲದ ವಾಸ್ತುಕೃತಿ ಎನಿಸುತ್ತದೆ. ಆದರೆ ಇಲ್ಲಿರುವ ಶಾಸನವು ಕ್ರಿ.ಶ. 1065 ರಲ್ಲಿ ರಚನೆಗೊಂಡಿದ್ದು ದೇವಾಲಯಕ್ಕೆ ದಾನ ನೀಡಿದ ವಿವರಗಳನ್ನ ನೀಡುತ್ತದೆ.

ಚಿತ್ರದುರ್ಗದ ಕೋಟೆಯೊಳಗಿನ ಗೋಪಾಲಕೃಷ್ಣ ದೇವಾಲಯವನ್ನು ಹೊರಗಿನಿಂದ ಗಮನಿಸಿದರೆ ವಿಜಯನಗರ ಕಾಲದ್ದೆನಿಸುತ್ತದೆ. ಆದರೆ ಕ್ರಿ.ಶ. 1338ರ ಶಾಸನವೊಂದು ಹೊಯ್ಸಳ ವೀರಬಲ್ಲಾಳ ದೇವನ ಮಹಾಪ್ರಧಾನ ರಾಮೇಯದಂ?ಯಕರ ಮಗ ಹಿರಿಯ ಬಲ್ಲಪ್ಪ ದಂ?ಯಕರು ಶ್ರೀ ಗೋಪಾಲಕೃಷ್ಣ ದೇವರಿಗೆ ಗೋಪಾಲಪುರ ಗ್ರಾಮವನ್ನೆ ದತ್ತಿ ನೀಡಿದ ವಿವರ ನೀಡುತ್ತದೆ. ಅಂದರೆ ಈ ದೇವಾಲಯವು ಹೊಯ್ಸಳ ಅಥವಾ ಹೊಯ್ಸಳ ಪೂರ್ವದ್ದಿರಬೇಕೆನಿಸುತ್ತದೆ. ಹೀಗೆ ಚಾಲುಕ್ಯರ ಕಾಲದ ಅನೇಕ ದೇವಾಲಯಗಳು ಹೊಯ್ಸಳ ಅಥವಾ ಹೊಯ್ಸಳ ಪೂರ್ವದ್ದಿರಬೇಕೆನಿಸುತ್ತದೆ. ಹೀಗೆ ಚಾಲುಕ್ಯ ಕಾಲದ ಅನೇಕ ದೇವಾಲಯಗಳು ಹೊಯ್ಸಳ ಹಾಗೂ ವಿಜಯನಗರ ಅರಸರ ಕಾಲಾವಧಿಯಲ್ಲಿ ಜೀರ್ಣೋದ್ಧಾರಗೊಂಡಿರುವುದಕ್ಕೆ ಶಾಸನೋಕ್ತ ಮಾಹಿತಿ ದೊರೆಯುತ್ತದೆ.

ಆರಂಭದಲ್ಲಿ ಚಾಲುಕ್ಯರ ಸಾಮಂತರಾಗಿ ನಂತರ ಸ್ವತಂತ್ರ ಅರಸರಾಗಿ ಆಳ್ವಿಕೆ ನಡೆಸಿದ ಹೊಯ್ಸಳ ಅರಸರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ಅತ್ಯಂತ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ಹಾಗಾಗಿ ಇವರ ಕಾಲಾವಧಿಯಲ್ಲಿ ಅತ್ಯಂತ ವಿಶಿಷ್ಟ ಶೈಲಿಯ ಆಕರ್ಷಣೀಯ ದೇವಾಲಯಗಳು ನಿರ್ಮಾಣಗೊಳ್ಳಲು ಸಾಧ್ಯವಾಯಿತು. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಇವರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳ ಸಂಖ್ಯೆ ಕಡಿಮೆ ಎಂದೇ ಹೇಳಬೇಕಾಗುತ್ತದೆ. ಬಹುಶಃ ತಮ್ಮ ಆಳ್ವಿಕೆಯ ಉತ್ತರದ ಗಡಿ ಪ್ರದೇಶ ಇದಾಗಿದ್ದರಿಂದ ದೇವಾಲಯ ನಿರ್ಮಾಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿಲ್ಲದಿರಬಹುದು. ಅಥವಾ ಅವರು ತಮ್ಮ ದೇವಾಲಯಗಳ ನಿರ್ಮಾಣಕ್ಕೆ ಬಳಸುತ್ತಿದ್ದ ಕಲ್ಲಿನ ಅಭಾವ ಇಲ್ಲಿದ್ದುದರಿಂದ ಹಿಂದಿನ ಕಾಲದ ಹಲವಾರು ದೇವಾಲಯಗಳ ಜೀರ್ಣೋದ್ಧಾರ ಮಾಡುವುದರ ಜೊತೆಗೆ ಕೆಲವು ದೇವಾಲಯಗಳನ್ನು ನಿರ್ಮಿಸಿರುವುದು ಇಲ್ಲಿನ ಶಾಸನಗಳಿಂದ ತಿಳಿದು ಬರುತ್ತದೆ. ಅವುಗಳಲ್ಲಿ ಪ್ರಮುಖ ವೆಂದರೆ, 1ನೇ ನರಸಿಂಹನ ಕಾಲದ ಕ್ರಿ.ಶ. 1161ರಲ್ಲಿ ನಿರ್ಮಾಣಗೊಂಡ ಹೆಗ್ಗೆರಿಯ ಶಾಂತಿನಾಥೇಶ್ವರ, ಬೇವಿನಹಳ್ಳಿಯ ಬಸದಿ, ನೀರುಂದದ ಸಿದ್ದೇಶ್ವರ, ಚಿತ್ರದುರ್ಗದ ಫಲ್ಗುಣೇಶ್ವರ ದಾವಾಲಯದ ಮುಂದಿನ ಮಂಟಪ, 2ನೇ ವೀರ ನರಸಿಂಹನ ಕಾಲದ ಹಿಡಂಬೇಶ್ವರ ದೇವಾಲಯ, ಬೇಬಲನಾಥ ದೇವಾಲಯ, ಹೆಗ್ಗೆರೆಯ ಕಲ್ಲೇಶ್ವರ ದೇವಾಲಯಗಳು ಪ್ರಮುಖವು, ಹೊಯ್ಸಳರು ದೇವಾಲಯ ಗಳನ್ನು ನಿರ್ಮಾಣ ಮಾಡುವಲ್ಲಿ ಚಾಲುಕ್ಯ ಶೈಲಿಯನ್ನೆ ಮುಂದುವರೆಸಿದ್ದಾರೆ. ಆದರೆ ಕೆಲವು ಅಂಶಗಳಲ್ಲಿ ಎತ್ತರವಾದ ಅಧಿಷ್ಠಾನ, ನಕ್ಷತ್ರಾಕಾರದ ತಳವಿನ್ಯಾಸ, ದೇವಾಲಯ ನಿರ್ಮಾಣಕ್ಕೆ ಮೃದುಶಿಲೆ (ಬಳಪದ ಕಲ್ಲು) ಇತ್ಯಾದಿ ಅಂಶಗಳನ್ನು ಅಳವಡಿಸಿಕೊಳ್ಳುವುದರ ಮೂಲಕ "ಹೊಯ್ಸಳರ ಶೈಲಿ" ಎಂದೇ ಕರೆಯಿಸಿಕೊಳ್ಳುವಷ್ಟರ ಮಟ್ಟಿಗೆ ಚಾಲುಕ್ಯ ಶೈಲಿಯಿಂದ ಭಿನ್ನತೆಯನ್ನು ಬಳಸಿಕೊಂಡಿದ್ದಾರೆ.

ಹೆಗ್ಗೆರೆಯ ಜೈನ ಬಸದಿ ಇವರ ಶೈಲಿಗೆ ಉತ್ತಮ ಉದಾಹರಣೆಯಾಗಿದೆ. ಗ್ರಾಮದ ಮಧ್ಯಭಾಗದಲ್ಲಿರುವ ಸುಪಾರ್ಶ್ವನಾಥ ಬಸದಿಯು ಪೂರ್ವಾಭಿಮುಖವಾಗಿದೆ. ಎತ್ತರವಾದ ಅಧಿಷ್ಠಾನದಲ್ಲಿರುವ ಈ ಬಸದಿಯು ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಭಾಗಗಳನ್ನು ಒಳಗೊಂಡಿದೆ. ಗರ್ಭಗೃಹದ ಮಧ್ಯದಲ್ಲಿ ಸಿಂಹಪೀಠದ ಮೇಲೆ ಬ್ರಹ್ಮದೇವರನ್ನು ಪ್ರತಿಷ್ಠಾಪಿಸಲಗಿದೆ. ಅದರ ಹಿಂಭಾಗ ಕಿರು ಜಗತಿಯನ್ನು ನಿರ್ಮಿಸಿ ಅದರ ಮೇಲೆ ಸುಪಾರ್ಶ್ವನಾಥನನ್ನು ಪ್ರತಿಷ್ಠಾಪಿಸ ಲಾಗಿದೆ. ವಿತಾನದಲ್ಲಿ ಅರಳಿದ ಪದದ ಅಲಂಕರಣವಿದೆ. ಪ್ರವೇಶದ್ವಾರ ಪಂಚಶಾಖೆಗಳಿಂದ ಕೂಡಿದ್ದು ಸರಳವಾಗಿದೆ. ಅಂತರಾಳದ ಪ್ರವೇಶದ್ವಾರದಲ್ಲಿ ಜಾಲಂಧ್ರಗಳ ಅಳವಡಿಕೆ ಯಿದೆ. ನವರಂಗದ ಮಧ್ಯದಲ್ಲಿ ಹೊಯ್ಸಳ ಶೈಲಿಯ ಅಂದರೆ ತಿರುಗುಣಿ ಯಂತ್ರದ ಸಹಾಯದಿಂದ ನಿರ್ಮಿಸಿದ ನಾಲ್ಕು ಕಂಬಗಳಿವೆ. ಒಂಭತ್ತು ಅಂಕಣಗಳಲ್ಲಿ ಒಂದೊಂದು ಅರಳಿದ ಪದ್ಮದ ಅಲಂಕರಣೆಯಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟ ಕುಮುದ, ಕಂಠ, ದಂತ ಪಂಕ್ತಿ ಮತ್ತು ಕಪೋತಭಾಗಗಳಿವೆ. ಗರ್ಭಗೃಹದ ಭಿತ್ತಿ ತ್ರಿರಥ, ನವರಂಗದ ಭಿತ್ತಿ ಪಂಚರಥಗಳಿಂದ ಕೂಡಿದೆ. ಭಿತ್ತಿಯ ಮೇಲೆ ಕಪೋತ–ಹಾರ ಭಾಗಗಳಿವೆ. ನಂತರದ ಭಾಗ ಜೀರ್ಣೋದ್ಧಾರಗೊಂಡಿದೆ. ಭಿತ್ತಿಯು ಭದ್ರ ಮತ್ತು

ಸಲಿಲಾಂತರಗಳನ್ನು ಹೊಂದಿದ್ದು, ಮಧ್ಯದಲ್ಲಿ ಅರಳಿದ ಪದ್ಮಗಳ ಕೆತ್ತನೆಯಿದೆ. ಹೀಗೆ ಈ ಬಸದಿಯು ಶುದ್ಧ ಹೊಯ್ಸಳ ಶೈಲಿಯಲ್ಲಿ ನಿರ್ಮಾಣಗೊಂಡಿದೆ.

ಚಿತ್ರದುರ್ಗ ಕೋಟೆಯಲ್ಲಿರುವ ಹಿಡಂಬೇಶ್ವರ ದೇವಾಲಯದಲ್ಲಿರುವ ಶಾಸನವು ಕ್ರಿ.ಶ. 1286ರಲ್ಲಿ ರಚನೆಗೊಂಡಿದ್ದು ಹೊಯ್ಸಳ ಅರಸ 2ನೇ ನರಸಿಂಹನ ಕಾಲದ್ದಾಗಿದೆ. ಈತನ ಮಹಾಪ್ರಧಾನ ಅಧಿಕಾರಿಯಾದ ಪೆರುಮಾಳ ದಂಣಾಯಕನು ಹಿಡಂಬೇಶ್ವರ, ಚೋಳೇಶ್ವರ ದೇವರ ಅಮೃತಪಡಿಗೆ ದತ್ತಿ ನೀಡಿದ ವಿವರಗಳನ್ನು ನೀಡುತ್ತದೆ. ಹಾಗೆಯೇ ಕ್ರಿ.ಶ. 1313ರ ಮತ್ತೊಂದು ಶಾಸನವು ವೀರಬಲ್ಲಾಳನ ಪ್ರಧಾನ ಅಧಿಕಾರಿ ಅಲ್ಲಪ್ಪ ದಂಣಾಯಕನು ಹುಳಿಯೂರು ನಾಡೊಳಗಿನ ಚಳ್ಳಕೆರೆಯನ್ನು ಕಲ್ಲಗೌಡನಿಗೆ

ಕೊಡುಗೆಯಾಗಿ ಕೊಟ್ಟ ಕಲ್ಲಿನಾಥನಿಗೆ ಸಮರ್ಪಿಸಿದ ವಿವರ ನೀಡುತ್ತದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಶಾಸನೋಕ್ತ ದೇವಾಲಯಗಳಲ್ಲಿ ಹೆಚ್ಚಿನವು ವಿಜಯನಗರ ಹಾಗೂ ಚಿತ್ರದುರ್ಗ ಪಾಳೆಯಗಾರರ ಕಾಲದವು, ವಿಜಯನಗರ ಅರಸರ ಕಾಲದ ದೇವಾಲಯಗಳಿಗೂ ಚಿತ್ರದುರ್ಗದ ಪಾಳೆಯಗಾರರ ಕಾಲದ ದೇವಾಲಯಗಳಿಗೂ ಹೆಚ್ಚಿನ ವ್ಯತ್ಯಾಸಗಳೇನೂ ಕಂಡು ಬರದೆ ಒಂದೇ ಶೈಲಿಯಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ. ಕ್ರಿ.ಶ. 14ನೇ ಶತಮಾನದ ಮಧ್ಯಭಾಗದಿಂದ ಕ್ರಿಶ. 16ನೇ ಶತಮಾನದ ಉತ್ತರಾರ್ಧದವರೆಗೂ ಆಳ್ವಿಕೆ ನಡೆಸಿದ ವಿಜಯನಗರ ಅರಸರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಈ ಭಾಗದಲ್ಲಿ ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ ರುವುದು ಶಾಸನಗಳಿಂದ ತಿಳಿದು ಬರುತ್ತದೆ.ಅವುಗಳಲ್ಲಿ ಪ್ರಮುಖವೆಂದರೆ ಚಿಕ್ಕಪುರದ ಸಿದ್ಧನಾಥ ದೇವಾಲಯ, ಪರಶುರಾಂಪುರದ ಗರುಡ ಮತ್ತು ಹನುಮಂತ ದೇವಾಲಯ, ರಾಮಗಿರಿಯ ರಾಮೇಶ್ವರ ಮತ್ತು ವೀರಭದ್ರೇಶ್ವರ ದೇವಾಲಯ, ಸೋಮೇರಹಳ್ಳಿಯ ಸೋಮೇಶ್ವರ ದೇವಾಲಯ, ಗೊಡಬನಾಳಿನ ಕಲ್ಲಿನಾಥ ದೇವಾಲಯ, ಮಾಳೇನಹಳ್ಳಿಯ ರಂಗನಾಥ ದೇವಾಲಯ, ಹಿರೇಗುಂಟ ನೂರಿನ ವಿನಾಯಕ ದೇವಾಲಯ, ಕಾಮಸಮುದ್ರದ ವೀರಭದ್ರ ದೇವಾಲಯ, ದೇವಸಮುದ್ರದ ವಿಠಲ ದೇವರ ದೇವಾಲಯ, ಹಿರಿಯೂರಿನ ತೇರುಮಲ್ಲೇಶ್ವರ, ಹೊಳಲ್ಕೆರೆಯ ಗೋಪಾಲಕೃಷ್ಣ ದೇವಾಲಯ, ಕಲ್ಕೆರೆಯ ಚೌಡೇಶ್ವರಿ ದೇವಾಲಯ ಇತ್ಯಾದಿಗಳು ಪ್ರಮುಖವಾಗಿವೆ.

ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯದ ಬಳಿಯಿರುವ ಶಾಸನವು ಕ್ರಿ.ಶ.1355 ರಲ್ಲಿ ರಚನೆಗೊಂಡಿದ್ದು ಮಲ್ಲಿನಾಥ ವೊಡೆಯನು ಸಿದ್ಧನಾಥ ದೇವರಿಗೆ ಕಲ್ಲುವುಪ್ಪರಿಗೆಯನು ಎತ್ತಿಸಿ ಆ ದೇವರ ಸಿಖರ ಪ್ರತಿಷ್ಠಾಪನೆ ಮಾಡಿ ದತ್ತಿ ನೀಡಿದ ವಿವರ ನೀಡುತ್ತದೆ. ಸಂಪಿಗೆ ಸಿದ್ದೇಶ್ವರ ದೇವಾಲಯವು ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಕಪೋತದ ಮೇಲ್ಭಾಗದ ಅಂಗಗಳು ವಿಜಯನಗರದ ಕಾಲದಲ್ಲಿ ನಿರ್ಮಾಣಗೊಂಡಂತೆ ಕಾಣುತ್ತದೆ. ಹಾಗೆಯೇ ಸಿದ್ದೇಶ್ವರನನ್ನು ಶಾಸನದಲ್ಲಿ ಸಿದ್ದನಾಥ ಎಂದು ಉಲ್ಲೇಖಿಸಿದ್ದು, ಇದರ ಮುಂದಿನ ಗಾಳಿಮಂಟಪಗಳನ್ನು ಮಲ್ಲಿನಾಥವೊಡೆಯನು ನಿರ್ಮಿಸಿದ್ದಾನೆನ್ನುವುದು ಹಲವು ವಿದ್ವಾಂಸರ ಅಭಿಮತ. ಹಿಡಂಬೇಶ್ವರ ದೇವಾಲಯದಲ್ಲಿರುವ ಕ್ರಿ.ಶ. 1412ರ ಶಾಸನವು ದೇವರಾಯನ ಮಹಾಮಂಡಳೇಶ್ವರನಾದ ವೀರಮಲ್ಲಂಗೊಡೆಯರು ಹಿಡಂಬೇಶ್ವರ ದೇವಾಲಯಕ್ಕೆ ಕುಂಚಿಗನ ಹಳ್ಳಿಯನ್ನು ದತ್ತಿ ನೀಡಿದ ವಿವರ ಉಲ್ಲೇಖಿಸುತ್ತದೆ. ಕ್ರಿ.ಶ. 1430ರ ದೇವರಾಯನ ಕಾಲದ ಮತ್ತೊಂದು ಶಾಸನವು ಕಲ್ಲಿನಾಥ ದೇವರಿಗೆ ದತ್ತಿ ನೀಡಿದ ವಿವರ ನೀಡುತ್ತದೆ.

ಕ್ರಿ.ಶ.1537ರ ಅಚ್ಚುತರಾಯನ ಕಾಲದ ಹಿರೇಗುಂಟನೂರಿನ ಶಾಸನವು ವಿನಾಯಕ ದೇವರಿಗೆ ಗುಡಿಯನ್ನು ಕಟ್ಟಿಸಿ ಗುಂಟನೂರು ಸೀಮೆಯೊಳಗಿನ ಮಲ್ಲಾಪುರ ಅಥವಾ ಬೆನಾಕಾಪುರವನ್ನು ದತ್ತಿ ಬಿಟ್ಟ ವಿವರ ನೀಡುತ್ತದೆ. ಕ್ರಿ.ಶ. 1535ರ ಅಚ್ಚುತರಾಯನ ಕಾಲದ ಮತ್ತೊಂದು ಶಾಸನವು ದುಂಮಿಯ ವೀರಭದ್ರ ದೇವರಿಗೆ ತನ್ನ ದಂಡನಾಯಕನಾದ ಕೃಷ್ಣಪ್ಪನಾಯಕನು ದತ್ತಿ ನೀಡಿದ ವಿವರವನ್ನು ನೀಡುತ್ತದೆ. ಇದೇ ಕಾಲದ ಮತ್ತೊಂದು ಶಾಸನವು ಚೌಡಪ್ಪನಾಯಕನು ಗುಂಡೇರಿಯ ವೀರಭದ್ರ ದೇವರಿಗೆ ದತ್ತಿ ನೀಡಿದ ವಿವರ ನೀಡುತ್ತದೆ.

ಕ್ರಿ.ಶ.1560–62ರ ಶಾಸನಗಳು ಸದಾಶಿವ ರಾಯನು ದೇವಸಮುದ್ರದ ವಿಠಲದೇವರ ಗುಡಿಗೆ ದತ್ತಿ ನೀಡಿದ ವಿವರವನ್ನು ಉಲ್ಲೇಖಿಸುತ್ತವೆ. ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಗರ್ಭಗೃಹ, ಅಂತರಾಳ ಹಾಗೂ ನವರಂಗ ಭಾಗಗಳನ್ನು ಗಮನಿಸಿದರೆ ಚಾಲುಕ್ಯ ಗಂಗರ ಕಾಲದಲ್ಲಿ ನಿರ್ಮಾಣಗೊಂಡಿದೆ ಎಂದು ಹೇಳಬಹುದು. ಆದರೆ ದೇವಾಲಯದ ಮುಖಮಂಟಪ, ದೀಪಸ್ತಂಭ ಹಾಗೂ ರಾಯಗೋಪುರಗಳು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಂತೆ ಕಾಣುತ್ತವೆ. ಇಲ್ಲಿನ ಕ್ರಿ.ಶ. 1567ರ ಸದಾಶಿವ ರಾಯನ ಕಾಲದ ಶಾಸನವು ಹರತಿಯ ಕೆಂಚಪ್ಪ ನಾಯಕನು ದತ್ತಿ ನೀಡಿದ ವಿವರ ನೀಡುತ್ತದೆ.

ಹೀಗೆ ವಿಜಯನಗರದ ಅರಸರುಗಳಾದ ಬುಕ್ಕರಾಯ, ದೇವರಾಯ, ಕೃಷ್ಣರಾಯ, ಅಚ್ಚುತರಾಯ ಹಾಗೂ ಸದಾಶಿವರಾಯರು, ಸ್ಥಳೀಯ ದಂಡನಾಯಕರುಗಳ ಸಹಾಯದಿಂದ ಕೆಲವು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಹಾಗೆಯೇ ಹಲವಾರು ದೇವಾಲಯಗಳನ್ನು ಜೀರ್ಣೋದ್ಧಾರ ಗೊಳಿಸಿರುವುದರ ಜೊತೆಗೆ ದತ್ತಿ ನೀಡಿರುವ ವಿವರಗಳು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ.1565ರಲ್ಲಿ ನಡೆದ ರಕ್ಕಸ – ತಂಗಡಿ ಯುದ್ಧ ನಂತರ ವಿಜಯನಗರ ಸಾಮ್ರಾಜ್ಯ ತನ್ನ ವೈಭವವನ್ನು ಕಳೆದುಕೊಂಡು ಪೆನುಗೊಂಡಿಗೆ ವರ್ಗಾಯಿಸಲ್ಪಟ್ಟಿತು. ಈ ಸನ್ನಿವೇಶದಲ್ಲಿ ಹಲವಾರು ಪಾಳೆಯಗಾರರು ಸ್ವತಂತ್ರವಾಗಿ ಆಳ್ವಿಕೆ ನಡೆಸಲು ಪ್ರಾರಂಭಿಸಿದರು. ಅವರಲ್ಲಿ ಚಿತ್ರದುರ್ಗದ ಆಳ್ವಿಕೆ ನಡೆಸಿದ "ಚಿತ್ರದುರ್ಗದ ಪಾಳೆಯಗಾರರು" ಪ್ರಮುಖರು.

ಚಿತ್ರದುರ್ಗದ ಪಾಳೆಯಗಾರರ ದೇವಾಲಯಗಳ ನಿರ್ಮಾಣ ಕಾರ್ಯದಲ್ಲಿ ವಿಜಯನಗರ ಅರಸರ ಶೈಲಿಯನ್ನೇ ಮುಂದುವರೆಸಿದ್ದಾರೆ. ಸಾಮಾನ್ಯವಾಗಿ ಇವರ ದೇವಾಲಯ ಗಳು ಒರಟಾದ ಮರಳು ಮಿಶ್ರಿತ ಕೆಂಪುಕಲ್ಲುಗಳಿಂದ ನಿರ್ಮಾಣಗೊಂಡಿವೆ. ಹಾಗೆಯೇ ವಿಶಾಲವಾಗಿಯೂ, ಬೃಹದಾಕಾರವಾಗಿಯೂ ಕಂಡುಬರುತ್ತವೆ. ಇವರ ಕಾಲದ ಪ್ರಮುಖ ದೇವಾಲಯಗಳೆಂದರೆ, ಬಾಗೂರಿನ ಚನ್ನಕೇಶವ, ಲಕ್ಷ್ಮೀ ದೇವಾಲಯ, ಹೊಸದುರ್ಗದ ವೀರಭದ್ರ, ಹಿರಿಯೂರಿನ ವೀರಭದ್ರ, ಹರತಿಯ ಮಲ್ಲಿಕಾರ್ಜುನ, ಚಿತ್ರದುರ್ಗದ ಚನ್ನಕೇಶವ, ವೆಂಕಟರಮಣ, ಉಚ್ಚಂಗಿ ಎಲ್ಲಮ್ಮ (ಉತ್ಸವಾಂಬ) ಹೊರಕೆರೆ ದೇವಪುರದ ಶ್ರೀರಂಗನಾಥ ದೇವಾಲಯ ಇತ್ಯಾದಿಗಳು ಪ್ರಮುಖವು. ಬಾಗೂರಿನ ಶ್ರೀ ಚನ್ನಕೇಶವ ದೇವಾಲಯವು ಸದಾಶಿವರಾಯನ ಕಾಲಕ್ಕಾಗಲೇ ನಿರ್ಮಾಣಗೊಂಡಿದ್ದರ ಬಗ್ಗೆ ಕ್ರಿ.ಶ.1556ರ ಶಾಸನವು ಮಾಹಿತಿಯನ್ನು ನೀಡುತ್ತದೆ. ಆದರೆ ಇಲ್ಲಿನ ಕ್ರಿ.ಶ.1571 ಮತ್ತೊಂದು ಶಾಸನವು. ಸಂತೆಬೆನ್ನೂರು ಹನುಮಪ್ಪನಾಯಕನ ಮಗ ರಾಜಪ್ಪ ನಾಯಕನು ತಮ್ಮ ತಂದೆ – ತಾಯಿಯರಿಗೆ ಪುಣ್ಯವಾಗಲೆಂದು ಕೇಶವ ದೇವಾಲಯದ ಆವರಣದಲ್ಲಿರುವ ಲಕ್ಷ್ಮೀ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ ದತ್ತಿ ನೀಡಿದ ವಿವರವಿದೆ. ಬಹುಶಃ ಈ ದೇವಾಲಯವು ವಿಜಯನಗರ ಅರಸರ ಕಾಲದಲ್ಲಿ ಪ್ರಾರಂಭಗೊಂಡು ಪಾಳೆಯಗಾರರ ಕಾಲಕ್ಕೆ

ಸಂಪೂರ್ಣಗೊಂಡಿಬಹುದೆಂದು ಹೇಳಬಹುದು. ಕ್ರಿ.ಶ. 1570ರ ಶಾಸನವು ಕಂಚಿಪುರದ ಅಲ್ಲಿನಾಥ ದೇವರಿಗೆ ಹರತಿಯ ಕೆಂಚಪ್ಪನಾಯಕನು ಚಿಕ್ಕ ಕರ್ಪೂರದ ಕಟ್ಟೆಯನ್ನು ದತ್ತಿ ನೀಡಿದ ಉಲ್ಲೇಖವಿದೆ. ಹುಲ್ಲೂರಿನ ಶ್ರೀ ವೀರಭದ್ರ ದೇವಾಲಯಕ್ಕೆ 2 ನೇ ಮದಕರಿ ನಾಯಕನು ದತ್ತಿ ನೀಡಿದ ವಿವರವನ್ನು ಕ್ರಿ.ಶ.1609ರ ಶಾಸನವೊಂದು ಮಾಹಿತಿ ನೀಡುತ್ತದೆ.

ಚಿತ್ರದುರ್ಗ ನಗರಕ್ಕೆ ಹೊಂದಿಕೊಂಡಂತೆ ತುರುವ ನೂರು ರಸ್ತೆಯಲ್ಲಿರುವ ಶ್ರೀ ವೆಂಕಟರಮಣ ದೇವಾಲಯವು ಕ್ರಿ.ಶ.16–17ನೇ ಶತಮಾನದಲ್ಲಿ ನಿರ್ಮಾಣ ಹೊಂದಿದೆ ಎಂದು ಅದರ ಲಕ್ಷಣಗಳ ಆಧಾರದ ಮೇಲೆ ಹೇಳಬಹುದು. ಕ್ರಿ.ಶ.1715ರ ಶಾಸನವು ಬಿಚ್ಚುಗತ್ತಿ ಭರಮಣ್ಣ ನಾಯಕನು ದೇವಾಲಯದ ಅಮೃತಪಡಿ, ನಂದಾದೀಪ, ಪುಷ್ಪಾರ್ಚನೆ ಇನ್ನಿತರ ಕಾರ್ಯಗಳಿಗೆ ಪಿಳ್ಳೇಕೆರನ ಹಳ್ಳಿಯನ್ನು ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ. ದೇವಾಲಯವು ವಿಶಾಲವಾದ ಪ್ರಾಕಾರದಲ್ಲಿದ್ದು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ರಂಗಮಂಟಪಗಳನ್ನು ಹೊಂದಿದೆ. ಗರ್ಭಗೃಹದ, ವಿಷ್ಣುವಿನ ಸ್ಥಾನಕ ಶಿಲ್ಪ, ನವರಂಗದ ಕಂಬಗಳು, ಕಂಬಗಳಲ್ಲಿರುವ ಉಬ್ಬುಶಿಲ್ಪಗಳು, ವಿಜಯನಗರ ಪಾಳೆಯ ಗಾರರ ಶೈಲಿಗೆ ಉತ್ತಮ ಉದಾಹರಣೆಗಳು, ನಗರದಲ್ಲಿರುವ ಚನ್ನಕೇಶವ ದೇವಾಲಯವೂ ಸಹ ಇದೇ ಶೈಲಿಯಲ್ಲಿದ್ದು ಇದೇ ಕಾಲದಲ್ಲಿ ರಚನೆಗೊಂಡಿರಬಹುದು. ಕ್ರಿ.ಶ.1576ರ ಶಾಸನವು ಕಸ್ತೂರಿ ರಂಗಪ್ಪನಾಯಕನು ಹೊರಕೆರೆ ದೇವಪುರದ ರಂಗನಾಥ ದೇವಾಲಯಕ್ಕೆ ದತ್ತಿ ನೀಡಿದ ವಿವರವನ್ನು ನೀಡುತ್ತದೆ. ಈ ದೇವಾಲಯವೂ ಸಹ ವಿಶಾಲವಾದ ಪರಕಾರದಲ್ಲಿದ್ದು ವಿಷ್ಣುವಿನ ದಶಾವತಾರ ಶಿಲ್ಪಗಳನ್ನು ಹೊಂದಿದೆ. ಇಲ್ಲಿರುವ ಶಿಲ್ಪಗಳೂ ಸಹ ವಿಜಯನಗರ ಪಾಳೆಯಗಾರರ ಕಾಲದ ರಚನೆಗಳೇ ಆಗಿವೆ.

ಇಂದು ಚಿತ್ರದುರ್ಗ ಜಿಲ್ಲೆಯಾದ್ಯಂತ ಇರುವ ಪ್ರತಿಯೊಂದು ಹಳ್ಳಿ–ಹಟ್ಟಿ–ನಗರಗಳಲ್ಲಿ ಸಾಮಾನ್ಯವಾಗಿ ದೇವಾಲಯಗಳು ಕಂಡುಬರುತ್ತವೆ. ಇವುಗಳಲ್ಲಿ ಕೆಲವೇ ಕೆಲವು ದೇವಾಲಯಗಳಿಗೆ ಮಾತ್ರ ಶಾಸನೋಕ ದಾಖಲೆಗಳಿದ್ದರೆ, ಬಹುತೇಕ ದೇವಾಲಯಗಳಿಗೆ ಶಾಸನೋಕ್ತ ದಾಖಲೆಗಳು ಸಿಗುವುದಿಲ್ಲ. ಕೆಲವು ಶಾಸನಗಳಲ್ಲಿ ದೇವಾಲಯ ನಿರ್ಮಾಣ ಕುರಿತು ಮಾಹಿತಿ ದೊರೆತರೂ ಆ ಸ್ಥಾನದಲ್ಲಿ ಇಂದು ದೇವಾಲಯವಿಲ್ಲದೆ ಸಂಪೂರ್ಣವಾಗಿ ನಾಶವಾಗಿರುವ ಉದಾಹರಣೆಗಳೂ ಇವೆ. ಹಾಗೆಯೇ ಕೆಲವು ದೇವಾಲಯ ಗಳಿಗೆ ಯಾವುದೇ ಶಾಸನೋಕ್ತ ದಾಖಲೆ ಇಲ್ಲದೇ ಹೋದರೂ ಅತ್ಯಂತ ಉತ್ತಮವಾದ, ಸುಸ್ಥಿತಿಯಲ್ಲಿರುವ ಕಲಾತ್ಮಕ ದೇವಾಲಯಗಳನ್ನು ನೋಡುತ್ತೇವೆ. ಹೀಗೆ ಚಿತ್ರದುರ್ಗ ಜಿಲ್ಲೆಯ ದೇವಾಲಯಗಳಿಗೆ ಸಂಬಂಧಿಸಿದಂತೆ ಶಾಸನಾಧಾರಗಳನ್ನು ಹುಡುಕುತ್ತಾ ಹೋದರೆ ಕ್ರಿಶ.851ರಲ್ಲಿ ಅಥವಾ ಅದಕ್ಕೂ ಪೂರ್ವದಲ್ಲಿ ನಿರ್ಮಾಣಗೊಂಡಿರುವ ಚಳ್ಳಕೆರೆ ತಾಲ್ಲೂಕಿನ ಶ್ರೀಮಲ್ಲೇಶ್ವರ ದೇವಾಲಯವೇ ಇಲ್ಲಿನ ಪ್ರಾಚೀನ ದೇವಾಲಯ. ಆದರೆ ಇಂದು ಸಂಪೂರ್ಣವಾಗಿ ನಾಶವಾಗಿದೆ.

## ರೆಫೆರೆನ್ಸಸ್


1. ಎಪಿಗ್ರಾಫಿಯಾ ಸಂಪುಟ: 11
2. ಡಾ.ಬಿ.ಸುರೇಶ–ಚಿತ್ರದುರ್ಗ–ದಾವಣಗೆರೆ ಜಿಲ್ಲೆಗಳ ದೇವಾಲಯಗಳು,ಸಂಶೋಧನಾ ಪ್ರಕಾಶನ, ಬಾಲೇನಹಳ್ಳಿ, ಚಳ್ಳಕೆರೆ, 2008.
3. ಡಾ.ಬಿ.ಸುರೇಶ ಮತ್ತು.ಕೆ.ಎನ್ ಮೋಹನ್ (ಸಂ): ಕರ್ನಾಟಕದ ವಾಸ್ತು ಶಿಲ್ಪಕಲೆ, ವಿಘ್ನೇಶ್ವರ ಪ್ರಕಾಶನ, ಮೈಸೂರು, 2019